ಮುಜರೈ.

ನೋಟಿಫಿಕೇಷನ್.

ತಾರೀಖು 22ನೆ ಅಕ್ಟೋಬರ್ 1903ನೆ ಇಸವಿ, ಬೆಂಗಳೂರು.

ನಂ. 852, ಮೈಸೂರಲ್ಲಿ ಶ್ರೀಮಂ ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶೋಭಕೃನ್ನಾಮ ಸಂವತ್ಸರದಲ್ಲಿ ನಡೆದ ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆಯಾದವರ ಹೆಸರು, ಪರೀಕ್ಷಿತ ವಿಷಯ, ಇವುಗಳನ್ನ ಈ ಕೆಳಗೆ ನಮೂದಿಸಿರುತ್ತೆ.—

ನಂ.	ಹೆಸರು.	ಪರೀಕ್ಷಿತ ವಿಷಯ.
		ಪ್ರಥಮ ಭಾಗ
		ದ್ವಿತೀಯ ಭಾಗ

ಮೈಸೂರ ಗೆಜೆಟ್.

ಸಂ. XXXVIII.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 43.

ಬೆಂಗಳೂರು, ಗುರುವಾರ, ನವಂಬರ್ ತಾ|| 5, ಸ್ರ 1903.

ವಿಷಯ ಸೂಚಿಕೆ.

1ನೆ ಭಾಗ–ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೆ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು, ರೆಜಿಸ್ಟ್ರೇರ್ ವ ಯಜ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಿಷ್ಠತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೆ ಭಾಗ–ಲೆಜಿಸ್‌ಲೇಟಿವ್ ರೆಗ್ಯುಲೇಷ್ಯನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ–ಸರ್ಕಾರೀ ಕಾಗದಪತ್ರಗಳು—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೆ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 14ನೆ ಅಕ್ಟೋಬರ್ 1903.

ನಂ. ಲೋ. ಬೋ. ಪಿ. 423, ಮದರಾಸು ಗವರ್ನ್‌ಮೆಂಟಿನವರಿಂದ ಕೊಡೋಣಾದ ಇದರಡೀ ಕಂಡ ಇಸ್ತಿಹಾರ್‌ನಾಮೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಮರಳೀ ಪ್ರಾಯಿಷ್ಮಾಡಲ್ಪಟ್ಟರುತ್ತೆ.

ನೀಲಗಿರಿ ಜಿಲ್ಲಾ ಉಟಕಮಂಡಿನಲ್ಲಿ ಪ್ಲೇಗ್ ರೋಗವು ಇರುವದ್ದರಿಂದಲೂ ಮತ್ತು ಅದು ಹರಡದಂತೆ ಮಾಡುವದು ಯುಕ್ತವೆಂತ ತೋರುವದ್ದರಿಂದಲೂ ರಂಜಾ ತಿಂಗಳ ಅಂತ್ಯ ಭಾಗವೂ ನಂತರ ಬರುವ ಷವ್ವಾಲ್ ತಿಂಗಳ ಮೊದಲುವಾರವೂ ಸೇರಿ ಆಗುವ 1903ನೆ ಇಸವಿ ಡಿಸೆಂಬರು 5ನೆ ತಾರೀಖಿನಿಂದ ಅದೇ ಮಾಹೆಯ 27ನೆ ತಾರೀಖಿನ ವರೆಗೂ ಉಭಯ ದಿನಗಳೂ ಸೇರಿ, ಭಿಕ್ಷಗಾರರು ಮತ್ತು ದೇಶಗೇಡಿಗಳು ಉಟಕಮಂಡಿಗೆ ಪ್ರಯಾಣ ಮಾಡಕೂಡದೆಂತಲೂ ಅದನ್ನು ಪ್ರವೇಶ ಮಾಡಕೂಡದೆಂತಲೂ ಅಲ್ಲಿ ಬಿಲ್ಲಕೂಡದೆಂತಲೂ ಮಂತ್ರಾಲೋಚಕ ಸಮಾಜ ಸಹಿತರಾದ ಗವರ್ನರವರು ಸ್ರ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ ಕಾನೂನನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ನಿರೋಧಿಸುತ್ತಾರೆ. ಮತ್ತು ಉಟಕಮಂಡಿಗೆ ಪ್ರಯಾಣ ಮಾಡುವ ಯಾ ಪ್ರಯಾಣ ಮಾಡುವದಾಗಿ ನಂಬಲು ಕಾರಣವುಳ್ಳ ಯಾವ ಭಿಕ್ಷಗಾರ ಅಥವಾ ದೇಶಗೇಡಿಯಾಗಲಿ, ನೀಲಗಿರಿ–ಮಲಬಾರ ಮತ್ತು ಕೊಯಿಮತ್ತೂರು ಜಿಲ್ಲಾ ಕಲೆಕ್ಟರುಗಳು ತಮಗೆ ಸೂಕ್ತವಾದಂತೆ ಏರ್ಪಾಡು ಮಾಡಿದ ಸ್ಥಳಗಳಲ್ಲಿ ನಿಲ್ಲದೇಕೆಂತಲೂ ಮತ್ತು ಸದರಿ ಕಲೆಕ್ಟರುಗಳಿಂದ ಇದಕ್ಕಾಗಿ ನೇಮಿಸಲ್ಪಟ್ಟ ಆಫಿಸರುಗಳ ಆಜ್ಞೆಯಂತೆ ನಡೆಯತಕ್ಕದ್ದೆಂತಲೂ ತಾತ್ಕಾಲಿಕ್ಕೆ ವಿಧಾಯಿಸಿರುತ್ತಾರೆ.

ತಾರೀಖು 17ನೆ ಅಕ್ಟೋಬರ 1903.

ನಂ. ಲೋ. ಬೋ. ಪಿ. 435, ಇಂಡಿಯಾ ಗವರ್ನಮೆಂಟಿನಿಂದ ಸ|| 1903ನೆ ಇಸವಿ ಸೆಪ್ಟಂಬರು 30ನೆ ತಾರೀಖಿನಲ್ಲಿ ಕೊಡೋಣಾದ 1485ನೆ ನಂಬರು ಇಸ್ತಿಹಾರ್ನಾಮೆಯನ್ನು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪುನಃ ಘಾಯಿಪ್ಮಾಡಲ್ಪಟ್ಟಿರುತ್ತೆ.

ಸ|| 1902ನೆ ಇಸವಿ ಅಕ್ಟೋಬರು 25ನೆ ಮುಕ್ತಂ ಹೋಂ ಡಿಪಾರ್ಟ್‌ಮೆಂಟಿನ 2278ನೆ ನಂಬರು ಇಸ್ತಿಹಾರ್ನಾಮೆಯಲ್ಲಿ ಸ|| 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIIನೆ ನಂಬರು ಕಾನೂನಿನ 2ನೆ ಪ್ರಕರಣಕ್ಕೆ ಸೇರಿದ 1ನೆ ಅಧೀನಪ್ರಕರಣವನ್ನನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ಮಂತ್ರಾಲೋಚಕ ಸಮಾಜ ಸಹಿತರಾದ ಗವರ್ನರ ಜನರಲ್ ಸಾಹೇಬ್ ಬಹದ್ದೂರ್‌ರವರು ಸ|| 1903ನೆ ಇಸವಿಯಲ್ಲಿ ಹೆಡ್‌ಜಾಜ್ ಯಾತ್ರೆಗೆ ಹೊರಡತಕ್ಕ ಕಾಲದಲ್ಲಿ ಬೊಂಬಾಯಿ ಆಧಿಪತ್ಯದಲ್ಲಿರುವ ರೇವುಗಳಾದ ಬೊಂಬಾಯಿ ಮತ್ತು ಕರಾಚಿ ಇವುಗಳಿಂದಲೂ ಬಂಗಾಳ ಆಧಿಪತ್ಯದಲ್ಲಿರುವ ಚಿಟಗಾಂಗ್‌ನಿಂದಲೂ ಸದರಿ ಯಾತ್ರೆಗೆ ಹೋಗಲು ಇಂಡಿಯಾ ದೇಶದ ಯಾವ ನಿವಾಸಿಗಾದರೂ ಕೆಲವು ಎಚ್ಚರಿಕೆಗಳಿಗೆ ವಳಪಟ್ಟು ಅಪ್ಪಣೆ ಕೊಡಬಹುದೆಂದು ಹುಕುಂ ಮಾಡಿದರು.

2. ಸ|| 1902ನೆ ಇಸವಿಯ ಮತ್ತು ಇದರ ಹಿಂದಿನ ಸಾಲುಗಳ ಯಾತ್ರಾ ಕಾಲದಲ್ಲಿ ಜಾರಿ ಮಾಡಿದ ಎಚ್ಚರಿಕೆಗಳ ಪೈಕಿ ಪ್ರಯಾಣಾಪೇಕ್ಷೆಯುಳ್ಳ ಯಾತ್ರಿಕರೆಲ್ಲರನ್ನೂ ಅವರವರ ಊರುಗಳಿಗೆ ಸಮೀಪದಲ್ಲಿ ಅಯಾ ನಾಡಿನ ಅಜಮಾಯಿಷಿ ಪಾಳಯದಲ್ಲಿ ಸೇರಿಸಿ 10 ದಿನಗಳ ಮಟ್ಟಿಗಾದರೂ ನಿಲ್ಲಿಸಿ ಅವರು ಹಡಗನ್ನೇರುವ ರೇವು ಪಟ್ಟಣಗಳಲ್ಲಿಯಾಗಲಿ ಅವುಗಳ ಸಮೀಪದಲ್ಲಿರುವ ಮುಖ್ಯವಾದ ಪಾಳಯಕ್ಕೆ ಪ್ರತ್ಯೇಕವಾದ ರೈಲ್ವೆ ಟ್ರೇಗಳಲ್ಲಿಯಾಗಲಿ ಅಥವಾ ಖಂಡಿಗಳಲ್ಲಿಯಾಗಲಿ ರವಾನಿಸುವದಕ್ಕೆ ಮುಂಚೆ ಅವರವರ ಬಟ್ಟೆ ಬರಿಗಳನ್ನು ಸೋಂಕು ಹೋಗುವಂತೆ (ಡಿಸ್‌ಇನ್‌ಫೆಕ್ಟ್) ಮಾಡುವುದು ಬಂದು ಅಂಶವಾಗಿತ್ತು. ಇಂಡಿಯಾ ಗವರ್ನಮೆಂಟಿನವರಿಗೆ ಅಸಮ್ಮತವಾದ ಖಡಾಖಂಡ ಏರ್ಪಾಡುಗಳನ್ನು ಜಾರಿ ಮಾಡದೆ ನಾಡಿನ ಪಾಳಯದಲ್ಲಿ ಯಾತ್ರಿಕರನ್ನು ಮೊದಲು ತಡೆಯುವುದು ಸಾಧ್ಯವೇ ಅಲ್ಲವೆಂತಲೂ ಬಂದುವೇಳೆ ಸಾಧ್ಯವಾದರೂ ಬಹಳ ಕಷ್ಟವೆಂತಲೂ ಅನುಭವ ಸಿದ್ಧವಾಗಿರುವುದು. ಆದ್ದರಿಂದ ಘನವನ್ನು ಹೊಂದಿದ ಚಕ್ರವರ್ತಿಯವರ ಗವರ್ನಮೆಂಟಿನ ಸಮ್ಮತಿಯಿಂದ ಬರುವ ಯಾತ್ರಾ ಕಾಲದಲ್ಲಿ ಯಾತ್ರಿಕರನ್ನು ನಿಲ್ಲಿಸುವುದಕ್ಕೆ ನಾಡಿನ ಪಾಳಯಗಳನ್ನು ಏರ್ಪಡಿಸಕೂಡದೆಂತಲೂ ಮತ್ತು ಯಾತ್ರಿಕರು ಹಡಗನ್ನೇರುವ ರೇವುಗಳಲ್ಲಿ ಏರ್ಪಾಡು ಮಾಡಿದ ದೊಡ್ಡ ಪಾಳಯಗಳಿಗೆ ಸೀದಾ ಹೋಗಬಹುದೆಂತಲೂ ತೀರ್ಮಾನಿಸಿರುತ್ತಾರೆ. ಆದರಂತೆ ಕೆಳಗೆ ನಮೂದಿಸಿರುವ ಕಾನೂನುಗಳಿಗೆ ಬಳಪಟ್ಟು ಇಂಡಿಯಾ ದೇಶದ ಯಾವ ನಿವಾಸಿಯಾಗಲಿ ಬರುವ ಯಾತ್ರಾ ಕಾಲದಲ್ಲಿ ಹಾಜ್‌ಗೆ ಹೋಗಬಹುದು.

3. ಸ|| 1902ನೆ ಇಸವಿ ಅಕ್ಟೋಬರು 25ನೆ ಮುಕ್ತಂಮಿನ ಹೋಂ ಡಿಪಾರ್ಟ್‌ಮೆಂಟಿನ 2278ನೆ ನಂಬರು ಇಸ್ತಿಹಾರ್ನಾಮೆಯಲ್ಲಿನ ಹುಕುಂಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತವೆ.

4. ಮಂತ್ರಾಲೋಚನೆಯ ಸಮಾಜ ಸಹಿತರಾದ ಗವರ್ನರ ಜನರಲ್ ಸಾಹೇಬ್ ಬಹದ್ದೂರ್‌ರವರು

(i) ಬೊಂಬಾಯಿ ಆಧಿಪತ್ಯದಲ್ಲಿನ ಬೊಂಬಾಯಿ ರೇವು ಬಂಗಾಳ ಆಧಿಪತ್ಯದಲ್ಲಿನ ಚಿಟಗಾಂಗ್ ರೇವು ಇವುಗಳು ವಿನಾ ಯ[illegible] ರೇವಿನಿಂದಲೂ ಮೆಕ್ಕಾ ಯಾತ್ರೆಗೆ ಹೋಗುವ ಉದ್ದೇಶದಿಂದ ಯಾವ ಮನುಷ್ಯನಿಗಾಗಲಿ ಹಡಗೇರುವುದಕ್ಕೆ ಅಪ್ಪಣೆ ಕೊಡತಕ್ಕದ್ದಲ್ಲವೆಂತಲೂ—

(ii) ಹಡಗನ್ನೇರುವ ರೇವಿನ ಅಥವಾ ಅದರ ಸಮೀಪದಲ್ಲಿ ಏರ್ಪಾಟು ಮಾಡಲ್ಪಟ್ಟ ಸ್ಥಳದಲ್ಲಿ ಆ ಸ್ಥಳದ ಛಾರ್ಜ್‌ನಲ್ಲಿರುವ ಮೆಡಿಕಲ್ ಆಫೀಸರಿಗೆ ಯಾತ್ರೆಯ ಉದ್ದೇಶದಿಂದ ಪ್ರಯಾಣ ಮಾಡುವ ಮನುಷ್ಯನು ಪ್ಲೇಗ್ ರೋಗದ ಸೋಂಕನ್ನು ತನ್ನ ಸಂಗಡ ತೆಗದುಕೊಂಡು ಹೋಗುವ ಅಪಾಯವು ನಿಶ್ಶೇಷವಾಗಿ ಹೋಯಿತೆಂದು ದೃಢವಾಗಿ ತೋರುವ ವರೆಗೂ ಅಂತಹ ಸ್ಥಳದಲ್ಲಿ ಅಜಮಾಯಿಷಿಯಲ್ಲಿಡಲ್ಪಟ್ಟಿದ್ದ ಹೊರತು ಯಾವ ಮನುಷ್ಯನು ಅಂತಹ ರೇವಿನಿಂದ ಅಂತಹ ಉದ್ದೇಶದೊಡನೆ ಹಡಗನ್ನೇರುವದಕ್ಕೆ ಅಪ್ಪಣೆ ಕೊಡತಕ್ಕದ್ದಲ್ಲವೆಂತಲೂ—

(iii) ಯಾತ್ರಿಕರನ್ನು ಅಜಮಾಯಿಷಿಯಲ್ಲಿ ನಿಲ್ಲಿಸುವದಕ್ಕೆ ಏರ್ಪಡಿಸಿರುವ ಸ್ಥಳಗಳು ವಿನಾ ಬೇರೆ ಸ್ಥಳಗಳಲ್ಲಿ ಸದರಿ ಯಾತ್ರಿಕರಿಗೆ ಪ್ರಯಾಣದ ಟಿಕೆಟ್ಟುಗಳನ್ನು ಮಾರತಕ್ಕದ್ದಲ್ಲವೆಂತಲೂ—ಆಜ್ಞಾಪಿಸಿರುತ್ತಾರೆ

5. ಮೇಲ್ಕಂಡ ಎಚ್ಚರಿಕೆಗಳಿಗೆ ಬಳಪಟ್ಟು ಹೆಡ್‌ಜಾಜ್‌ಗೆ ಯಾತ್ರೆ ಹೊರಡುವುದಕ್ಕೆ ಅಪ್ಪಣೆ ಕೊಡಬಹುದೆಂದು ಇಂಡಿಯಾ ಗವರ್ನಮೆಂಟಿನವರು ತೀರ್ಮಾನಿಸಿದ್ದಾಗ್ಯೂ ಮುಖ್ಯವಾಗಿ ತುರ್ಕಿ ಗವರ್ನಮೆಂಟಿನಿಂದ ವಿಧಿಸಲ್ಪಟ್ಟಿರುವ ಖಂಡಿತವಾದ ಕ್ವಾರಂಟೈನ್ ನಿಬಂಧನೆಗಳನ್ನು ಮತ್ತು ಅರಬ್ಬೀದೇಶಕ್ಕೆ ಸೇರಿದ ಕೂಡ್ಲೆ ಯಾತ್ರಿಕರಿಗೆ ಉಂಟಾಗುವ ಅನಾನುಕೂಲ್ಯವನ್ನು ಕಷ್ಟವನ್ನೂ ಆಲೋಚಿಸಿ ಮುಂದಿನ ಯಾತ್ರಾಕಾಲದವರೆಗೂ ಅವರ ಉದ್ದೇಶಗಳನ್ನು ನೆರವೇರಿಸುವುದನ್ನು ತಳ್ಳಬೇಕೆಂದು ಯಾತ್ರಿಕರಿಗೆ ಜನ್ನಾಗಿ ಬುದ್ಧಿ ಹೇಳಬೇಕೆಂದು ಗತ ವರ್ಷದಲ್ಲಿ ಕೊಟ್ಟ ಎಚ್ಚರಿಕೆಯನ್ನು ಪುನಃ ಕೊಡುವುದು ಇಂಡಿಯಾ ಗವರ್ನಮೆಂಟಿನವರಿಗೆ ಅವಶ್ಯವಾಗಿ ತೋರುತ್ತದೆ.

ತಾರೀಖು 20ನೆ ಅಕ್ಟೋಬರು 1903.

ನಂ. 441—ಲೋ. ಬೋ. ಪಿ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, 1903ನೆ ಜುಲೈ 8ನೆ ಮುಕ್ತಂ ಲೋ. ಬೋ. ಪಿ. 29ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ರೋಗ ತಗಲಿದ ಪ್ರದೇಶಗಳಾಗಿ ಪ್ರಸಿದ್ಧಪಡಿಸಲ್ಪಟ್ಟ ಹಾಸನದ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ಎರಡು ತಿಂಗಳುಗಳಿಗಿಂತ ಜಾಸ್ತಿಯಾಗಿ ಪ್ಲೇಗ್ ರೋಗವು ಇಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1. ಸಂಕೇನಹಳ್ಳಿ	...	ಹಾಸನ	3. ರಂಗಾಪುರ	..	ಅರಸೀಕೆರೆ
2. ಚನ್ನಪಟ್ಟಣ	...	ಡಿಟೋ	4. ಹುಲ್ಲಕಲ್	..	ಅರಕಲಗೂಡು

ತಾರೀಖು 20ನೆ ಅಕ್ಟೋಬರ್ 1903.

ನಂ. ಲೋ. ಬೋ. ಪಿ. 439, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬ್ಯೆ ಪ್ರಸಿದ್ಧ ಪಡಿಸುವದೇನಂದರೆ—ಸಾಂಕ್ರಾಮಿಕ ರೋಗಗಳ ಕಾನೂನನ್ನು ಅನುಸರಿಸಿ 1898ನೆ ಫೆಬ್ರವರಿ 10ನೆ ಮಕ್ತುಂ 939ಸಿ—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರು ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ಕಾನೂನುಗಳ ಉದ್ದೇಶಗಳಿಗಾಗಿ ಹಾಸನದ ಡಿಸ್ಟ್ರಿಕ್ಟಿನ ಲ್ಲರುವ ಇದರಡೀ ಕಂಡ ಸ್ಥಳಗಳು "ರೋಗ ತಗಲಿದ ಪ್ರದೇಶಗಳಾಗಿ" ಎಣಿಸಲ್ಪಡತಕ್ಕದ್ದು:—

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ದೊಡ್ಡ ಆಲದಹಳ್ಳಿ	ಹಾಸನ	17.	ಬೇಲೂರು	ಬೇಲೂರು
2.	ಅಮ್ಮೆನಗುಡಿ ಕೊಪ್ಪಲ್	ಡಿಟೋ	18.	ಮುದುಗೆರ	ಡಿಟೋ
3.	ಹಲಿವಾಗಲ್	ಡಿಟೋ	19.	ಅಗ್ರಹಾರ	ಚನ್ನರಾಯಪಟ್ಟಣ
4.	ಕಡಯ	ಡಿಟೋ	20.	ಜಕ್ಕೇನಹಳ್ಳಿ	ಡಿಟೋ
5.	ಬಾಕೇನಹಳ್ಳಿ	ಡಿಟೋ	21.	ಜಡಿಗಾನಹಳ್ಳಿ	ಡಿಟೋ
6.	ಸಿದ್ದಾಪುರ	ಡಿಟೋ	22.	ಬಾಗೂರು	ಡಿಟೋ
7.	ಗೋವಿಂದಪುರ	ಡಿಟೋ	23.	ಮೂಡನಹಳ್ಳಿ	ಡಿಟೋ
8.	ಅಮ್ಮಿಗನಹಳ್ಳಿ	ಡಿಟೋ	24.	ಆಡಿಹಳ್ಳಿ	ಡಿಟೋ
9.	ಸಾಮಪುರ	ಡಿಟೋ	25.	ಓಬಲಾಪುರ	ಡಿಟೋ
10.	ಚಿಕ್ಕಬ್ಯಾಡಗೆರೆ	ಬೇಲೂರು	26.	ಚಾವೇನಹಳ್ಳಿ	ಡಿಟೋ
11.	ಹಿರಿಹಸದ	ಡಿಟೋ	27.	ಮುಗಳಿಕೊಪ್ಪಲ್	ಆಲೂರು (ಸಬ್ ತಾ॥)
12.	ಕನಾಯಿಕನಹಳ್ಳಿ	ಡಿಟೋ	28.	ಆನೆಹಳ್ಳದ ಕೊಪ್ಪಲ್	ಡಿಟೋ
13.	ಕಂದಾವರ	ಡಿಟೋ	29.	ಕಟ್ಟೆಗೋಡು	ಡಿಟೋ
14.	ಪನಾಯಿಕನಹಳ್ಳಿ	ಡಿಟೋ	30.	ಚಿಗಲೂರು	ಡಿಟೋ
15.	ಅಂಡೆಲೆ	ಬೇಲೂರು	31.	ಕಾಮಸಂದ್ರ	ಅರಸೀಕೆರೆ
16.	ಕರಗದ	ಡಿಟೋ			

ತಾರೀಖು 18ನೆ ಸೆಪ್ಟಂಬರ್ 1903.

ನಂ. 658—ಜು., ಮೈಸೂರು ಸೀಮೆಯ ರಸಿಡೆಂಟರವರ ಫಸ್ಟ್ ಅಸಿಸ್ಟೆಂಟರವರಿಂದ ಕೊಡಲ್ಪಟ್ಟ 1903ನೆ ಸೆಪ್ಟಂಬರ್ 1 ಮರ್ಕುಮಿನ ಇದರಡೀ ಕಂಡ ನೋಟಿಸು ಸಮಸ್ತ ಜನಗಳ ತಿಳುವಳಿಕೆ ಬ್ಯೆ ಪುನಹ ಘಾಯಿಮ್ಮಾಡಲ್ಪಟ್ಟಿರುತ್ತದೆ:—

"ಸ॥1878ನೆ ಇಸವಿಯ ಇಂಡಿಯರ್ ಆರ್ಮ್ಸ್ ಆಕ್ಟನುಸರಿಸಿ ಕೊಡಲ್ಪಟ್ಟ ರೂಲುಗಳಿಗನುಸಾರವಾಗಿ ಬ್ರಿಟಿಷ್ ಇಂಡಿಯಾ ದೇಶದಿಂದ ಬೆಂಗಳೂರ ಸಿವಿಲ್ ವ ಮಿಲಿಟರಿ ಸ್ಟೇಷನ್ ಸಹಿತವಾಗಿ ಮೈಸೂರ ಸಂಸ್ಥಾನಕ್ಕೆ ಆಯುಧಗಳನ್ನೂ ಮತ್ತು ಮದ್ದು ವಗೈರೆ ಗಳನ್ನೂ ಆಮದು ಮಾಡಲಿಕ್ಕೆ ಲೈಸೆನ್ಸುಗಳಿಗೋಸ್ಕರ ಅರ್ಜಿಗಳು ಮತ್ತು ಈ ರೂಲುಗಳಿಗೆ ಸಂಬಂಧಪಟ್ಟ ದರೋಬಸ್ತು ಕಾಗದ ಪತ್ರಗಳು ಬೆಂಗಳೂರಲ್ಲಿರುವ ಮೈಸೂರು ಸೀಮೆಯ ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರಿಗೆ ಬರದುಕೊಳ್ಳಬೇಕೇ ಹೊರತು, ಮೈಸೂರು ಸೀಮೆಯ ರೆಸಿಡೆಂಟರವರಿಗೆ ಬರೆದುಕೊಳ್ಳಕೂಡದು."

ತಾರೀಖು 24ನೆ ಅಕ್ಟೋಬರ್ 1903.

ನಂ. 831—ಜ್ಯು. 16—1900-01, ಸ॥ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 5ನೆ ಸೆಕ್ಷನ್ ಅನುಸರಿಸಿ ಗೋದೀಬಿದನೂರು ತಾಲ್ಲೂಕು ಮಂಜೇನಹಳ್ಳಿ ಹೋಬಳಿಯನ್ನ ದೊಡ್ಡಬಳ್ಳಾಪುರದ ಮುನಸೀಫರ ಸಿವಿಲ್ ಎಕ್ತ್ಯಾರಿಯಿಂದ ಚಿಕ್ಕಬಳ್ಳಾಪುರದ ಮುನಸೀಫರ ಸಿವಿಲ್ ಎಕ್ತ್ಯಾರಿಗೂ ಮತ್ತು ಚಿಂತಾಮಣಿ ತಾಲ್ಲೂಕು ಕೈವಾರ ಹೋಬಳಿಯನ್ನ ಚಿಕ್ಕಬಳ್ಳಾಪುರದ ಮುನಸೀಫರ ಸಿವಿಲ್ ಎಕ್ತ್ಯಾರಿಯಿಂದ ಕೋಲಾರದ ಮುನಸೀಫರ ಸಿವಿಲ್ ಎಕ್ತ್ಯಾರಿಗೂ, 1904ನೆ ಜನವರಿ ಗುರೆ) ತಾರೀಖಿನಾರಭ್ಯ ವರ್ಗ ಮಾಡತಕ್ಕದ್ದೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮಂ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ.

ತಾರೀಖು 29ನೆ ಅಕ್ಟೋಬರ್ 1903.

ನಂ. 850—ಜು., ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ ಹೊಳಲಕೆರೆ ತಾಲ್ಲೂಕಿನ ಚಾರ್ಜಿನಲ್ಲಿರುವ ತಾಲ್ಲೂಕು ಷಿರಿಸ್ತೆದಾರ್ರಾದ ಕೆ. ರಾಮರಾಯರು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 30ನೆ ಅಕ್ಟೋಬರ್ 1903.

ನಂ. 1563—ಲೋ. ಫಂ. 243-96, ಇದರಡೀ ಕಂಡ ದೊಡ್ಡಮನುಷ್ಯರುಗಳು ಜಗಳೂರ ಮ್ಯುನಿಸಿಪಲ್ ಕೋರ್ಟಿನ ಮೆಂಬರುಗಳಾಗಿ ಮೊಕರರ್ ಯಾ ಪುನಃ ಮೊಕರರ್ರಾಡಲ್ಪಟ್ಟಿರುತ್ತಾರೆ:—

ಹೊಸ ಮೊಕರರಾತಿ.		ಕಾಲಾತಿಕ್ರಮಣವಾದ ಮೆಂಬರುಗಳು.
(1)	ವರ್ತಕರು ವ ಜಮೀನ್ದಾರ್ರಾದ ಮೆ॥ ತಿಪ್ಪಣ್ಣನವರು.	ಕೆಲಸದಿಂದ ನಿವೃತ್ತರಾದ ಮೆ॥ ಸುಬ್ಬಣ್ಣನವರಿಗೆ ಬದಲಾಗಿ.
(2)	ವರ್ತಕರು ಮತ್ತು ಜಮೀನ್ದಾರ್ರಾದ ಮೆ॥ ಗೊಂಚಿಗರ್ ಗುರ್ರಪ್ಪನವರು.	ಕೆಲಸದಿಂದ ನಿವೃತ್ತರಾದ ಮೆ॥ ಚನ್ನಪ್ಪನವರಿಗೆ ಬದಲಾಗಿ.

ಪುನಃ ಮೊಕರರಾತಿ.

(1) ಮೆ॥ ಶಂಕರಪ್ಪನವರು. | (2) ಮೆ॥ ಫಕೀರ್‌ಸಾಹೇಬರು | (3) ಮೆ॥ ನಾಗೋಜಿರಾಯರು.

ತಾರೀಖು 2ನೆ ನವಂಬರ್ 1903.

ನಂ. 880 -- ಜು, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ, ಚಿತ್ರದುರ್ಗದ ಡಿಸ್ಟ್ರಿಕ್ಟ್ ದಾವಣಗೆರೆಯ ಆಕ್ಟಿಂಗ್ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಮೆ|| ಬಿ. ರಾಮಸ್ವಾಮಿಅಯ್ಯನವರು ಮೊದಲನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಪೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 3ನೆ ನವಂಬರ್ 1903.

ನಂ. 1640—ಲೋ. ಫಂ. 85–96, ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವಫ್ಲೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಕೋಲಾರ ಟವನಿನ ದೊಡ್ಡಪೇಟೆಯಿಂದ ಕಾಟರ್ ಪಾಳ್ಯಕ್ಕೆ ಹೋಗುವ ರಸ್ತೆಯನ್ನು ಬಡಾಯಿಸುವ ಬಗ್ಗೆ ಬೇಕಾಗಿರುತ್ತದೆ :—

ಪಾರ್ಸಲ್ ನಂಬರ್.	ಸರ್ವೆ ನಂಬರ್.	ಮಾಲೀಕನ ಹೆಸರು.	ಹೊಗದುಕೊಳ್ಳುವ ಉದ್ದೇಶ.	ವಿಸ್ತೀರ್ಣ ಅಡಿಗಳು.		ಚಕ್ಕುಬಂದಿ.			
				ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	2036 1769	ಚಿಂದಲೂರು ತಿಪ್ಪೈಯ್ಯ	ಅಂಗಡಿ	13+0 2	36	ಕಾಟರ್ ಪಾಳ್ಯಕ್ಕೆ ಹೋಗುವ ಬೀದಿ	ಇತ್ತ್ತಾಂಡಹಳ್ಳಿ ವೆಂಕಟಸುಬ್ಬಯ್ಯನ ಜಮೀನು	ದೊಡ್ಡಪೇಟೆ	ರಸ್ತೆ ಮತ್ತು ವೀರಪ್ಪಯ್ಯನ್ಗಾರ ಚಿಕ್ಕಮುನಿಯಪ್ಪನ ಜಮೀನು

ತಾರೀಖು 4ನೆ ನವಂಬರ್ 1903.

ನಂ. 905—ಜು., ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ, ಇದರಡೀ ಕಂಡ ಅಮಲ್ದಾರು ವ 3ನೆ ಕ್ಲಾಸ್ ಮ್ಯಾಜಿಸ್ಟ್ರೇಟರು 2ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಪೊಕರರ್ಮಾಡಲ್ಪಟ್ಟಿರುತ್ತಾರೆ :—

1. ಮೆ|| ಎ. ಕೃಷ್ಣೇ ಅರಸಿನವರು, ನಾಗಮಂಗಲದ ಅಮಲ್ದಾರು.
2. ಮೆ|| ಬಿ. ಕೇಸರ್‌ಸಿಂಗ್ ಯವರು, ಮಳವಳ್ಳಿಯ ಅಮಲ್ದಾರು
3. ಮೆ|| ಸಿ. ವೆಂಕಟರಾಯರು, ಶ್ರೀರಂಗಪಟ್ಟಣದ ಅಮಲ್ದಾರು.

ತಾರೀಖು 4ನೆ ನವಂಬರ್ 1903.

ನಂ. 907—ಜು., ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ ದಾವಣಗೆರೆ ತಾಲ್ಲೂಕಿನ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ|| ಬಿ. ಏಸ್. ವೆಂಕಟೇಶಯ್ಯನವರು ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಪೊಕರರ್ಮಾಡಲ್ಪಟ್ಟಿರುತ್ತಾರೆ. ಮತ್ತು ಅವರಿಗೆ 37ನೆ ಸೆಕ್ಷನ್ ಅನುಸರಿಸಿ ಸದರೀ ಕ್ಲಾಸಿನ ಮ್ಯಾಜಿಸ್ಟ್ರೇಟರವರಿಗೆ ಗವರ್ನ್ಮೆಂಟಿನವರು ಕೊಡಬಹುದಾದ ನಾಲ್ಕನೇ ಷೆಡ್ಯೂಲಿನಲ್ಲಿ ಜಾಸ್ತಿ ಅಧಿಕಾರಗಳಾಗಿ ವಿವರಿಸಲ್ಪಟ್ಟ ಇದರಡೀ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ:—

(1) ಹೇಸಿಕೆಗಳನ್ನು ಬಾರಿಬಾರಿಗೂ ಮಾಡದಂತೆ ಅಡ್ಡೀಪಡಿಸಲಿಕ್ಕೆ ಹುಕುಂಗಳು ಮಾಡುವ ಬಗ್ಗೆ ಅಧಿಕಾರ, ಸೆಕ್ಷನ್ 143.

(2) 144ನೆ ಸೆಕ್ಷನ್ ಅನುಸರಿಸಿ ಹುಕುಂಗಳು ಮಾಡುವ ಬಗ್ಗೆ ಅಧಿಕಾರ.

(3) ಲ್ಯಾಷ್ ವಿಚಾರಣೆ ಮಾಡುವ ಬಗ್ಗೆ ಅಧಿಕಾರ, ಸೆಕ್ಷನ್ 174.

(4) ಫಿರ್ಯಾದಿನ ಮೇಲೆ ತಕ್ಸೀರುಗಳನ್ನು ವಿಚಾರಣೆ ಮಾಡುವ ಬಗ್ಗೆ ಅಧಿಕಾರ, ಸೆಕ್ಷನ್ 191.

(5) ಪೊಲೀಸು ರಿಪೋರ್ಟುಗಳ ಮೇಲೆ ತಕ್ಸೀರುಗಳನ್ನು ವಿಚಾರಣೆ ಮಾಡುವ ಬಗ್ಗೆ ಅಧಿಕಾರ, ಸೆಕ್ಷನ್ 191.

2. ದಾವಣಗೆರೆ ತಾಲ್ಲೂಕಿನ ಅಮಲ್ದಾರ್ ವ ಮ್ಯಾಜಿಸ್ಟ್ರೇಟರಾಗಿರುವ ವರಿವಿಗೂ ಸದರೀ ಯವರು ಮೇಲ್ಕಂಡ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ತಾರೀಖು 4ನೆ ನವಂಬರ್ 1903.

ನಂ. 909—ಜು., ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ, ಎಡಹಳ್ಳಿ ಮ್ಯುನಿಸಿಫರಾದ ಮೆ|| ಎಸ್. ನರಸಿಪ್ಪೈಯ್ಯಂಗಾರ್, ಬಿ. ಎ, ಬಿ. ಎಲ್., ಯವರು 2ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಪೊಕರೂರು ಮಾಡಲ್ಪಟ್ಟಿರುತ್ತಾರೆ.

ತಾರೀಖು 15ನೆ ಅಕ್ಟೋಬರ್ 1903.

ನಂ. ರೆ. 1064, ಸ್ ಈ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಚನ್ನಗಿರಿ ತಾಲ್ಲೂಕಿನ ಹೊಸಹಳ್ಳಿ ಗ್ರಾಮಕ್ಕೆ ಹೊಸಗ್ರಾಮ ನಿವೇಶನವನ್ನು ಏರ್ಪಡಿಸತಕ್ಕ ಬಗ್ಗೆ ಬೇಕಾಗಿರುತ್ತದೆ. ಮತ್ತು ಅದೇ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಫಸ್ಟ್ ಅಸಿಸ್ಟೆಂಟ್ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರನ ಹೆಸರು.	ಸರ್ವೆ ನಂ.	ಜಮೀನು ವಿಸ್ತೀರ್ಣ.	ಆಕಾರ.	ಚಕ್ಕುಬಂದಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಶಿವಮೊಗ್ಗ	ಚನ್ನಗಿರಿ	ನಲ್ಲೂರು	ಹೊಸಹಳ್ಳಿ	ಪೊಡ್ಡರ್ ದಾಸಾಜೋಯಿ	139 ಖುಷ್ಕಿ	ಎಕರೆ. ಗುಂಟೆ. 10 21	ರೂ. ಆ. ಪೈ. 6 8 0	ಸರ್ವೆ ನಂ. 152	ಸರ್ವೆ ನಂ. 137	ಸರ್ವೆ ನಂ. 138	ಸರ್ವೆ ನಂ. 140 ಮತ್ತು 141

ತಾರೀಖು 2ನೆ ನವೆಂಬರ್ 1903.

ನಂ. ರೆ. 1168—ರೆ. ಫೈ. 67—96-7, ಆಫೀಷಿಯೇಟಿಂಗ್ ಡೆಪ್ಯುಟಿ ಕಮಿಷನರಾದ ಮು|| ಕೆ. ಎಸ್. ದೊರಸ್ವಾಮಿ ಆಯ್ಯರ್ ಯವರು ತುಮಕೂರು ಡಿಸ್ಟ್ರಿಕ್ಟ್ ವ ಟ್ರೆಜರಿಯ ಚಾರ್ಜನ್ನು 1903ನೆ ಅಕ್ಟೋಬರ್ 12ನೆ ತಾರೀಖಿನ ಪೂರ್ವಾಹ್ನದಲ್ಲಿ ಡೆಪ್ಯುಟಿ ಕಮಿಷನರಾದ ಮೆ|| ಎಂ. ಎಸ್. ನಾರಾಯಣಾಯರಿಗೆ ಒಪ್ಪಿಸಿರುತ್ತಾರೆ.

ತಾರೀಖು 2ನೆ ನವೆಂಬರ್ 1903.

ನಂ. ರೆ. 1174, ಸ್ ಈ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಬ್ಯಾನೆರಿ ರಸ್ತೆಯಲ್ಲಿ ಬೆಂಗಳೂರ ಸಿವಿಲ್ ಮಿಲಿಟರಿ ಸ್ಟೇಷನ್ ಮ್ಯುನಿಸಿಪಾಲಿಟಿಯ ಗೊಬ್ಬರದ ಡೆಪೋವಿಗೋಸ್ಕರ ಬೇಕಾಗಿರುತ್ತದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಬೆಂಗಳೂರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರ್ರ ಹೆಸರು.	ಹೊಂದಬೇಕಾಗಿರುವ ಜಮೀನಿನ ವಿವರ.			ಚಕ್ಕುಬಂದಿ.			
					ನಂ.	ವಿಸ್ತೀರ್ಣ.		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎಕರೆ.	ಗುಂಟೆ.				
ಬೆಂಗಳೂರು	ಬೆಂಗಳೂರು	ಕಸಬಾ	ಬಾಯಂಗುಟ್ಟಾ ಬೇವರಜೇಬಿನ ಹಳ್ಳಿ	ಬಿ. ವೆಂಕಟರಾಮೈಯ್ಯ.	...	1	...	ಕಾಚರಕಹಳ್ಳಿ ಸರಹದ್ದು ಸುತ್ತಾ ಹಾಲಿ ಗೊಬ್ಬರದ ಡೆಪ್ಪೋ	ಬಿ. ವೆಂಕಟರಾಮೈಯ್ಯನವ ಜಮೀನಿನ ನಿಕ್ಕಿ ಪಾಣಾ	ರಾಯಪ್ಪನ ಹೊಲ	ಪೆರಪ್ಪನ ಹೊಲ

ತಾರೀಖು 2ನೆ ನವೆಂಬರ್ 1903.

ನಂ. ರೆ. 1182, ಸ್ ಈ 1888ನೆ ಇಸವಿಯ IVನೆ ನಂಬರ್ ರೆಗ್ಯುಲೇಷ್ ಆದ ಮೈಸೂರ ಲ್ಯಾಂಡ್ ರೆವಿನ್ಯೂ ಕೋಡಿನ 236ನೆ ಸೆಕ್ಷನ್ ಅನುಸರಿಸಿ ಬೇಲೂರು ತಾಲ್ಲೂಕು ಅರೆಹಳ್ಳಿ ಹೋಬಳಿಯಲ್ಲಿರುವ ಜೋಡಿ ಕಂದಾವರ ಗ್ರಾಮಕ್ಕೆ ಸದರೀ ಕೋಡಿನ VIII ರಿಂದ Xರ ವರಿಗಿನ ಅಧ್ಯಾಯಗಳ ನಿಯಮಗಳನ್ನು ಲಗಾವು ಮಾಡುವ ಬಗ್ಗೆ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ.

ತಾರೀಖು 3ನೆ ನವಂಬರ್ 1903.

ನಂ. ರೆ. 1194—ರೆ. ಫೈ. - 35–1901, ಮೈಸೂರು ಸರ್ವಿಸ್ ರೆಗ್ಯುಲೇಷ್ಯನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟು ಮೂಡಗೆರೆ ತಾಲ್ಲೂಕು ಅಮಲ್‌ದಾರ್‌ರಾದ ಮೆ॥ ಅಬ್ದುಲ್ ಹಕೀಂ ಯವರಿಗೆ 1903ನೆ ಅಕ್ಟೋಬರ್ 7ನೆ ತಾರೀಖಿನಾರಭ್ಯ ಮಂಜೂರಾತಿ ನಿರೀಕ್ಷಿಸಿಕೊಟ್ಟಿದ್ದ 14 ದಿವಸಗಳ ಪ್ರಿವಿಲೇಜ್ ರಜಾ ಮಂಜೂರು ಮಾಡಲ್ಪಟ್ಟಿರುತ್ತೆ. ಸದರಿ ಅಮಲ್‌ದಾರ್‌ರು ರಜಾದ ಮೇಲಿದ್ದ ಕಾಲದಲ್ಲಿ ತಾಲ್ಲೂಕು ಶಿರಸ್ತೇದಾರ್‌ರಾದ ವ್ಯಾಸರಾಯರು ಸದರ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜ್ಜನಲ್ಲಿದ್ದರು.

ತಾರೀಖು 3ನೆ ನವಂಬರ್ 1903.

ನಂ. ರೆ. 1197, ಸಬ್ ಡಿವೀರ್ಜ ಆಫೀಸರಾದ ಮೆ॥ ಕೆ. ದೊರಸ್ವಾಮಿ ಐಯ್ಯರವರು ಮೈಸೂರು ಡಿಸ್ಟ್ರಿಕ್ಟಿನ ಫೈಂಜ್ ಸಬ್ ಡಿವೀರ್ಜಗೆ ನೇಮಿಸಲ್ಪಟ್ಟಿರುತ್ತಾರೆ. ಫೈಂಜ್‌ರಾಕ್ಟ್ ಸಬ್ ಡಿವೀಜನಿನ ಚಾರ್ಜಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮೆ॥ ಎಂ. ಜಂಗೈಯ್ಯ ಕೆಟ್ಟಿಯವರು ಜನರಲ್ ಡ್ಯೂಟಿಗೋಸ್ಕರ ಬೆಂಗಳೂರ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ. ಚಾರ್ಜ್ ಒಪ್ಪಿಸಿದ ನಂತರ ಕೆಲಸಕ್ಕೆ ದಾಖಲಾಗತಕ್ಕದ್ದು.

ಹುಕುಂ ಬವೋಜೀಬ್,
ಹೆಚ್. ವಿ. ನಂಜುಂಡ್ಪಯ್ಯ,
ಜನರಲ್ ಆ ರವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಟ್ರಕ್ಷನ್ಸ್.

ತಾರೀಖು 29ನೆ ಅಕ್ಟೋಬರ್ 1903.

ನಂ. 1161—5862, ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖಾ (ರೋಕಲ್) ಇಂಜನಿಯರ್ ಸಿಬ್ಬಂದಿಯಲ್ಲಿ ಇದರಡೀ ಕಂಡ ಬಡ್ತಿಗಳು ನಮೂದು ಮಾಡಲ್ಪಟ್ಟ ತಾರೀಖಿನಾರಭ್ಯ ಹುಕುಂ ಮೊಡಲ್ಪಟ್ಟಿರುತ್ತವೆ :—

ನಂ.	ಹೆಸರು.	ಹಾಲಿ ಕ್ಲಾಸು.	ಬಡ್ತಿ ಮಾಡಲ್ಪಟ್ಟ ಕ್ಲಾಸು.	ಬಡ್ತಿಯ ಸ್ವಭಾವ.	ಯಾವ ಲಾಗಾಯತು.	ಷರಾ.
1	ಮೆ॥ ಕ. ಅನಂತಾಚಾರ್ಯ, ಎಲ್. ಸಿ. ಇ., ಯವರು	ಮೊದಲನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್, ಖಾಯಂ	3ನೆ ಕ್ಲಾಸ್ ಅಸಿಸ್ಟೆಂಟ್ ಇಂಜನಿಯರ್	ಹಂಗಾಮಿ	27— 4—03	ರಜಾದಲ್ಲಿರುವ ಅಸಿಸ್ಟೆಂಟ್ ಇಂಜನಿಯರಾದ ಮೆ॥ ಟಿ. ಎಸ್. ಕೇಶವಯ್ಯಂಗಾರ್ಯರಿಗೆ ಬದಲಾಗಿ.
2	ಮೆ॥ ಬಿ. ಗರುಡಾಚಾರ್ಯ, ಎಲ್. ಸಿ. ಇ., ಯವರು	2ನೆ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್, ಖಾಯಂ	ಮೊದಲನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	
3	ಮೆ॥ ಬಿ. ನಂಜುಂಡಾರಾಧ್ಯ, ಎಲ್. ಸಿ. ಇ., ಯವರು	3ನೆ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್, ಖಾಯಂ	2ನೆ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	
4	ಮೆ॥ ಬಿ. ಬಿ. ಗರುಡಾಚಾರ್ಯ, ಎಲ್. ಸಿ. ಇ., ಯವರು	ಮೊದಲನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್ ಖಾಯಂ, ವ 3ನೆ ಕ್ಲಾಸ್ ಅಸಿಸ್ಟೆಂಟ್ ಇಂಜನಿಯರ್, ಹಂಗಾಮಿ	3ನೆ ಕ್ಲಾಸ್ ಅಸಿಸ್ಟೆಂಟ್ ಇಂಜನಿಯರ್	ಖಾಯಂ	13— 6—03	ಮೃತಪಟ್ಟ ಅಸಿಸ್ಟೆಂಟ್ ಇಂಜನಿಯರಾದ ಮೆ॥ ಆರ್. ಇ. ಎಫ್. ದೇವಿ ಯವರಿಗೆ ಬದಲಾಗಿ.
5	ಮೆ॥ ಟಿ. ಜಿ. ಲಕ್ಷ್ಮಣರಾವ್, ಎಲ್. ಸಿ. ಇ., ಯವರು	2ನೆ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್, ಖಾಯಂ, ವ 1ನೆ ಕ್ಲಾಸ್, ಹಂಗಾಮಿ	ಮೊದಲನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	
6	ಮೆ॥ ಎ. ಪುಟ್ಟಸ್ವಾಮ್ಯಯ್ಯ, ಬಿ. ಎ., ಎಲ್. ಸಿ. ಇ., ಯವರು	3ನೆ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್, ಖಾಯಂ, ವ 2ನೆ ಕ್ಲಾಸ್, ಹಂಗಾಮಿ	2ನೆ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	